# ಕರ್ನಾಟಕ ವಿಧಾನ ಪರಿಷತ್ತು

ವಿಷಯ: ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಮಾಜಿ ಹಾಗೂ ಹಾಲಿ ಶಾಸಕರುಗಳ ವಾಸ್ತವ್ಯಕ್ಕಾಗಿ ಒದಗಿಸಲಾಗಿರುವ ಅತಿಥಿ ಕೊಠಡಿಗಳ ಬಾಡಿಗೆ ಹಣವನ್ನು ಮಾನ್ಯ ಮಾಜಿ/ಹಾಲಿ ಶಾಸಕರುಗಳ ಪಿಂಚಣಿ/ವೇತನದಿಂದ ಕಟಾವುಗೊಳಿಸುವ ಬಗ್ಗೆ.

*****

**ಓದಲಾಗಿದೆ:-**

1. ಮಾನ್ಯ ಸಭಾಪತಿಯವರ ಟಿಪ್ಪಣಿ ಸಂಖ್ಯೆ:ಕವಿಪ:ಸಕ:886:2021 ದಿನಾಂಕ:23.08.2021
2. ಕಡತ ಸಂಖ್ಯೆ:ಕವಿಪ:ಶಾಭ:858:ಮಾ.ಸ.ವೇಕೊಬಾ:2021, ಕಂಡಿಕೆ ಸಂಖ್ಯೆ: 1ರಿಂದ 11ರವರೆಗೆ.

**ಪ್ರಸ್ತಾವನೆ:-**

ಓದಲಾಗಿರುವ ಕ್ರಮ ಸಂಖ್ಯೆ:(1) ಮತ್ತು (2) ರಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಮಾಜಿ ಶಾಸಕರುಗಳ ವಾಸ್ತವ್ಯಕ್ಕಾಗಿ ಹಾಗೂ ಹಾಲಿ ಶಾಸಕರುಗಳ ಶಿಫಾರಸ್ಸು ಪತ್ರದ ಮೇರೆಗೆ ಬರುವ ಅತಿಥಿಗಳ ವಾಸ್ತವ್ಯಕ್ಕಾಗಿ ಶಾಸಕರ ಭವನದಲ್ಲಿ ಒದಗಿಸಲಾಗುವ ಕೊಠಡಿಗಳ ಬಾಡಿಗೆಯನ್ನು ನಗದು ರೂಪದಲ್ಲಿ ಪಡೆಯಲಾಗುತ್ತಿರುವುದನ್ನು ರದ್ದುಗೊಳಿಸಿ ವಾಸ್ತವ್ಯಕ್ಕಾಗಿ ಪಡೆದ ಅತಿಥಿ ಕೊಠಡಿಗಳ ಬಾಡಿಗೆ ಹಣವನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮಾನ್ಯ ಮಾಜಿ/ಹಾಲಿ ಶಾಸಕರುಗಳ ಪಿಂಚಣಿ/ವೇತನದಿಂದ ಕಟಾವುಗೊಳಿಸಬೇಕೆಂಬ ಪ್ರಸ್ತಾವನೆಗೆ ಮಾನ್ಯ ಸಭಾಪತಿಯವರು ಅನುಮೋದಿಸಿರುತ್ತಾರೆ.

**ಆದೇಶ ಸಂಖ್ಯೆ:ಕವಿಪ:ಆ-1:31: ಶಾ ಭ ಕೊ ಬಾ:2021**
**ಬೆಂಗಳೂರು, ದಿನಾಂಕ:28.09.2021.**

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಮಾಜಿ ಶಾಸಕರುಗಳ ವಾಸ್ತವ್ಯಕ್ಕಾಗಿ ಹಾಗೂ ಹಾಲಿ ಶಾಸಕರುಗಳ ಶಿಫಾರಸ್ಸು ಪತ್ರದ ಮೇರೆಗೆ ಬರುವ ಅತಿಥಿಗಳ ವಾಸ್ತವ್ಯಕ್ಕಾಗಿ ಶಾಸಕರ ಭವನದಲ್ಲಿ ಒದಗಿಸಲಾಗುವ ಕೊಠಡಿಗಳ ಬಾಡಿಗೆಯನ್ನು ನಗದು ರೂಪದಲ್ಲಿ ಪಡೆಯಲಾಗುತ್ತಿರುವುದನ್ನು ರದ್ದುಗೊಳಿಸಿ ವಾಸ್ತವ್ಯಕ್ಕಾಗಿ ಪಡೆದ ಅತಿಥಿ ಕೊಠಡಿಗಳ ಬಾಡಿಗೆ ಹಣವನ್ನು ಮಾನ್ಯ ಮಾಜಿ/ಹಾಲಿ ಶಾಸಕರುಗಳ ಪಿಂಚಣಿ/ವೇತನದಿಂದ ಕಟಾಯಿಸಲು ತಕ್ಷಣದಿಂದ ಜಾರಿಗೆ ಬರುವಂತೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

**ಮಾನ್ಯ ಸಭಾಪತಿಯವರ ಆದೇಶಾನುಸಾರ,**

**(ಬಿ.ಟಿ. ಶಿವಕುಮಾರ್)**
ಉಪ ಕಾರ್ಯದರ್ಶಿ,
ಕರ್ನಾಟಕ ವಿಧಾನ ಪರಿಷತ್ತು.

**ಪ್ರತಿಗಳು:-**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು
2. ಮಾನ್ಯ ಸಭಾಪತಿಯವರ ಆಪ್ತ ಕಾರ್ಯದರ್ಶಿಯವರಿಗೆ, ಕವಿಪ.,
3. ಕಾರ್ಯದರ್ಶಿಯವರ ಪತ್ರಾಂಕಿತ ಆಪ್ತ ಸಹಾಯಕರಿಗೆ, ಕವಿಪ.,
4. ಅಪರ ಕಾರ್ಯದರ್ಶಿ/ಜಂಟಿ ಕಾರ್ಯದರ್ಶಿಯವರ ಆಪ್ತ ಸಹಾಯಕರಿಗೆ, ಕವಿಪ.,
5. ಉಪಕಾರ್ಯದರ್ಶಿ/ಅಧೀನ ಕಾರ್ಯದರ್ಶಿ/ಶಾಖಾಧಿಕಾರಿ/ಆಡಳಿತ ಶಾಖೆ/ಲೆಕ್ಕಪತ್ರ ಶಾಖೆ-2, ಕವಿಪ.,
6. ಉಪ ಕಾರ್ಯದರ್ಶಿ, ಶಾಸಕರ ಭವನ, ಕವಿಪ.,
7. ಆಂತರಿಕ ಆರ್ಥಿಕ ಸಲಹೆಗಾರರು/ಆರ್ಥಿಕ ಅಧಿಕಾರಿ, ಆಯವ್ಯಯ ಶಾಖೆ, ಕವಿಪ.,
8. ಖಜಾನಾಧಿಕಾರಿ, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
9. ಗಣಕ ಕೇಂದ್ರ, ಕವಿಪ.,
10. ಸಚಿವಾಲಯದ ಎಲ್ಲಾ ಅಧಿಕಾರಿಗಳಿಗೆ, ಕವಿಪ.,
11. ಸಂಬಂಧಪಟ್ಟಕಡತಕ್ಕೆ/ರಕ್ಷಾಕಡತಕ್ಕೆ/ಬಿಡಿ ಪ್ರತಿಗಳು